**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 445/2023** **CW**-3 **PW**-2

**ಸಾಕ್ಷಿಯನ್ನು ದಿಃ 18.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಅಸ್ಲಾಂ |
| ತಂದೆಯ ಹೆಸರುಃ | ಮೊಹಮದ್ ಖಾಸಿಂ |
| ವಯಸ್ಸುಃ | 43 ವರ್ಷ |
| ವೃತ್ತಿಃ | ಆಟೋ ಚಾಲಕ |
| ವಾಸ ಸ್ಥಳಃ | ಚನ್ನರಾಯಪಟ್ಟಣ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

3-4 ವರ್ಷಗಳ ಹಿಂದೆ ನಾನು ಬಾಗೂರು ರಸ್ತೆಯಲ್ಲಿದ್ದಾಗ ಪೋಲೀಸರು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ.

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿರುವುದಿಲ್ಲ. ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ. ಆರೋಪಿ ಗೊತ್ತು.

(**ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 06.12.2022 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಚಾಸಾ-1 ರವರು ನನ್ನನ್ನು ಠಾಣೆಗೆ ಕರೆಸಿಕೊಂಡು ಬಾಗೂರು ರಸ್ತೆಯಲ್ಲಿ ಒಂದು ಅಂಗಡಿಯಲ್ಲಿ ದನದ ಮಾಂಸ

ಮಾರಾಟು ಮಾಡುತ್ತಿದ್ದಾರೆ ಎಂದು ಮಾಹಿತಿ ತಿಳಿಸಿದ್ದು, ಪಂಚರಾಗಿ ಇರುವಂತೆ ಮಾಹಿತಿ ಕೋರಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಬೆಳಗ್ಗೆ 9.15 ರ ಸಮಯದಲ್ಲಿ ನಾನು ಚಾಸಾ-1 ಮತ್ತು ಅವರ ಸಿಬ್ಬಂದಿಯವರೊಂದಿಗೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ವ್ಯಕ್ತಿ ಮಾಂಸವನ್ನು ಮಾರಾಟ ಮಾಡುವ ಉದ್ದೇಶದಿಂದ ಮಾಂಸವನ್ನು ಇಟ್ಟುಕೊಂಡಿದ್ದು, ದಾಳಿ ಮಾಡಿದ್ದು ಸದರಿ ವ್ಯಕ್ತಿಯನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಸದರಿ ಅಂಗಡಿಯಲ್ಲಿ 24 ವರೆ ಕೆ ಜಿ ಮಾಂಸ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ.

ಬೆಳಗ್ಗೆ 10.30 ರಿಂದ 11.30 ರ ವರೆಗೆ ಪೋಲೀಸರು ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 06.12.2022 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹೇಳಿಕೆಯನ್ನು ಓದಿ ಹೇಳಲಾಗಿ ಅದನ್ನು ಅಲ್ಲಗಳೆದಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಸಿ ಎಮ್ ರವರಿಂದ ಃ**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ನಿವೇದಿಸಿಕೊಂಡಿದ್ದು, ಅನುಮತಿಸಲಾಯಿತು.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**